ತಹಸೀಲ್ದಾರ್‌ರಿಂದ ಮತ್ತು ಡಿ.ಸಿ.ರವರಿಂದ ವರದಿ ತರಿಸಿಕೊಂಡು ಅದಕ್ಕಿಂತ ಮುಂಚೆ ಅವರು ಜಮೀನು ಉಳುಮೆ ಮಾಡುತ್ತಿದ್ದರು ಎಂದರೆ ಮಾತ್ರ ಅವರಿಗೆ ಕೊಡುವ ವ್ಯವಸ್ಥೆಯನ್ನು ಮಾಡಲು ಅವರಿಗೆ ಮಾತ್ರ ಕಾಲ್‌ಫರ್ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಲಿ ಎಂದು ತಮ್ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ಗೃಹ ಮಂಡಳಿಯ ಮನೆಗಳು.

298 (2146) **ಶ್ರೀ ಯು.ಆರ್. ಸಭಾಪತಿ:-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆ-ಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕರ್ನಾಟಕ ಗೃಹ ಮಂಡಳಿ ಕಟ್ಟಿರುವ ಮನೆಗಳು ಎಷ್ಟು? ಯಾವ ಯಾವ ಊರಿನಲ್ಲಿ ಎಷ್ಟು ಮನೆಗಳಿವೆ ? (ವಿವರ ನೀಡುವುದು).

ಆ) ಇನ್ನು ಉಳಿದಿರುವ ಮನೆಗಳು ಎಷ್ಟು? ಇದನ್ನು ಯಾವಾಗ ಹಂಚಿಕೆ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಕರ್ನಾಟಕ ಗೃಹ ಮಂಡಳಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಿರುವ ಮನೆಗಳು ಈ ಕೆಳ-ಕಂಡಂತೆ ಇರುತ್ತವೆ.

	ಸ್ಥಳ	ಮನೆಯ ವರ್ಗ	ರಾಜ್ಯ ಯೋಜನೆ	ಹುಡ್ಕೋ ಯೋಜನೆ	ಒಟ್ಟು
1.	ಕುಂಪೆತಬೈಲ್	ಇಡಬ್ಲ್ಯೂಎಸ್	-	50	50
	ಮಂಗಳೂರು	ಎಲ್‌ಐಜಿ	49	30	79
		ಎಂಐಜಿ	23	54	77
			72	134	206
2.	ಮರಕದ	ಇಡಬ್ಲ್ಯೂಎಸ್	-	190	190
	ಮಂಗಳೂರು	ಎಲ್‌ಐಜಿ	-	094	094
		ಎಂಐಜಿ	-	38	38
			-	322	322
3.	ಪದವುಶಕ್ತಿನಗರ	ಎಲ್‌ಐಜಿ	-	24	24
	ಮಂಗಳೂರು	ಎಂಐಜಿ	-	13	13
		ಎಸ್‌ಆರ್‌ಹೆಚ್‌ಎಸ್	96	-	96
			96	37	133

4.	ಶಿವಳ್ಳಿ	ಎಲ್‌ಐಜಿ	-	84	84
	ಮಣಿಪಾಲ	ಎಂಐಜಿ	-	129	129
			-	213	213
5.	ದೋಡ್ಡಣಗುಡ್ಡೆ	ಇಡಬ್ಲ್ಯೂಎಸ್	-	24	24
	ಉಡುಪಿ	ಎಲ್‌ಐಜಿ	60	80	140
		ಎಂಐಜಿ	50	28	78
		ಎಸ್‌ಆರ್‌ಹೆಚ್‌ಎಸ್	48	-	48
			158	132	290
6.	ಮೂಡಬಿದ್ರೆ	ಇಡಬ್ಲ್ಯೂಎಸ್	-	23	23
		ಎಲ್‌ಐಜಿ	8	48	56
		ಎಂಐಜಿ	9	21	30
			17	92	109
7.	ಕಾರ್ಕಳ	ಎಲ್‌ಐಜಿ	5	58	63
		ಎಂಐಜಿ	-	80	80
		ಎಸ್‌ಆರ್‌ಹೆಚ್‌ಎಸ್	10	-	10
			15	138	153
8.	ಮುಲ್ಕಿ	ಇಡಬ್ಲ್ಯೂಎಸ್	10	-	10
		ಎಲ್‌ಐಜಿ	10	-	10
		ಎಂಐಜಿ	13	-	13
			33	-	33
9.	ಕಂಭಾಕ	ಎಲ್‌ಐಜಿ	10	-	10
		ಎಂಐಜಿ	10	-	10
			20	-	20
10.	ಪುತ್ತೂರು	ಎಲ್‌ಐಜಿ	27	-	27
		ಎಂಐಜಿ	25	-	25
		ಆರ್‌ಹೆಚ್‌ಎಸ್	10	-	10
			62	-	62
11.	ಬೆಳ್ತಂಗಡಿ	ಎಲ್‌ಐಜಿ	16	-	16
12.	ಸೂಳ್ಯ	ಎಲ್‌ಐಜಿ	20	-	20
			20	-	20
		ಒಟ್ಟು ಮೊತ್ತ	509	1068	1577

ಆ) ಹಂಚಿಕೆ ಆಗದೆ ಉಳಿದಿರುವ ಮನೆಗಳು ಈ ಕೆಳಕಂಡಂತೆ ಇರುತ್ತದೆ.

			ಮನೆಗಳು	ಬಾಕಿ ಇರುವ ಅರ್ಜಿಗಳು
1.	ಕಾರ್ಕಳ	ಎಲ್ಐಜಿ	20	4
		ಎಂಐಜಿ	34	10
2.	ಮೂಡಬಿದ್ರೆ	ಎಲ್ಐಜಿ	1	7
		ಇಡಬ್ಲ್ಯೂಎಸ್	2	3
3.	ದೊಡ್ಡನಗುಡ್ಡೆ ಉಡುಪಿ	ಎಂಐಜಿ	1	7

ಮೇಲೆ ತೋರಿಸಿದಂತೆ ಉಳಿದಿರುವ ಮನೆಗಳನ್ನು 1998ರ ಆಗಸ್ಟ್ 31 ರೊಳಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಕಾರ್ಕಳದಲ್ಲಿ ಕಟ್ಟಿರುವ ಎಲ್ಐಜಿ ಮತ್ತು ಎಂಐಜಿ ಮನೆಗಳಿಗೆ ಸಾಕಷ್ಟು ಬೇಡಿಕೆ ಇರುವುದಿಲ್ಲ. ಈ ಮನೆಗಳಿಗೆ ಅರ್ಜಿಗಳು ಬಂದ ಕೂಡಲೇ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 1577 ಮನೆಗಳನ್ನು ಕಟ್ಟಲಾಗಿದೆ ಎಂದು ಹೇಳಿ ವಿವರವನ್ನು ಕೊಟ್ಟಿದ್ದಾರೆ. ಈ ಎಲ್ಲಾ ಕಟ್ಟಲ್ಪಟ್ಟ ಮನೆಗಳು ಅತ್ಯಂತ ಕಳಪೆ ಹಾಗೂ ಕೆಳಮಟ್ಟದ ಕಾಮಗಾರಿಗಳಿಂದ ಕೂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಈ ಯೋಜನೆಯಡಿಯಲ್ಲಿ ಕಟ್ಟತಕ್ಕಂಥ ಏನು ಮನೆಗಳು ಇವೆ, ಅವುಗಳನ್ನು ಉತ್ಕೃಷ್ಟ ರೀತಿಯಲ್ಲಿ ಕಟ್ಟಲಿಕ್ಕೆ ಸಾಧ್ಯವಿಲ್ಲವೇ? ಕಾರ್ಕಳದಲ್ಲಿ ಈಗಾಗಲೇ 54 ಮನೆಗಳು ಹಂಚಿಕೆಯಾಗದೇ ಉಳಿದಿವೆ ಎಂದಿದ್ದಾರೆ. ಇದಕ್ಕೆ ಕಳಪೆ ಕಾಮಗಾರಿ ಕಾರಣವೇ ಎನ್ನುವುದನ್ನು ಸ್ಪಷ್ಟೀಕರಿಸಬೇಕು. 1996-97 ರಲ್ಲಿ ಹೊಸದಾಗಿ ಎಷ್ಟು ಮನೆಗಳನ್ನು ಹುಡ್ಕೋ ಯೋಜನೆಯಲ್ಲಿ ಕಟ್ಟುವ ಗುರಿಯನ್ನು ಇಟ್ಟುಕೊಂಡಿದ್ದೀರಿ. ಇದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಕಳ ತಾಲ್ಲೂಕಿನಲ್ಲಿ ಎಂಐಜಿ ಮನೆ, ಎಲ್ಐಜಿ 20 ಮನೆಗಳು ಕಟ್ಟುವುದು ಬಾಕಿ ಇದೆ. ಅದರಲ್ಲಿ 4 ಅರ್ಜಿಗಳು ಮಾತ್ರ ಬಂದಿದೆ. 20 ಮನೆ ಕೊಡುವುದಕ್ಕೆ ಎಂಐಜಿಯಲ್ಲಿ 34, ಎಲ್ಐಜಿಯಲ್ಲಿ 20, ಬಾಕಿ ಅರ್ಜಿ ಬಂದಿರುವುದು ಬರೀ ನಾಲ್ಕು ಮಾತ್ರ ಇದೆ. ಕಾರ್ಕಳದ್ದು ಬೇಡಿಕೆ ಇಲ್ಲ. ಅದರಲ್ಲಿ ಮೂಡಬಿದರಿನಲ್ಲಿ ಒಂದು ಮನೆ ಇದೆ, ಐದು ಅರ್ಜಿಗಳು ಬಂದಿದೆ, ಇಡಬ್ಲ್ಯೂಎಸ್ 2 ಇದೆ, ಮೂರು ಅರ್ಜಿಗಳು ಬಂದಿದೆ. ಉಡುಪಿಯಲ್ಲಿ ಒಂದು ಮನೆ ಇದೆ ಏಳು ಅರ್ಜಿಗಳು ಬಂದಿವೆ ಕಾರ್ಕಳದ್ದು ಇಲ್ಲಿಯವರೆಗೂ ಕಳಪೆ ಕಾಮಗಾರಿಯ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ನಮ್ಮ ಇಲಾಖೆಯ ವತಿಯಿಂದಲೂ

ಬಂದಿಲ್ಲ. ಏನಾದರು ಇದ್ದರೆ ಅದನ್ನು ತಿಳಿಸಿದರೆ ಯಾವ ರೀತಿಯ ತನಿಖೆಯನ್ನು ಬೇಕಾದರೂ ಮಾಡಿಸುವುದಕ್ಕೆ ತಾನು ತಯಾರು ಇದ್ದೇನೆ.

ಶ್ರೀ ಯು.ಆರ್..ಸಭಾಪತಿ:- ನನ್ನ ಪ್ರಶ್ನೆ ಇಷ್ಟೆ. ಅಲ್ಲಿ ಕಳಪೆ ಕಾಮಗಾರಿಯಾಗಿದೆ ಎಂದು ಹೇಳಿ ಅರ್ಜಿ ಹಾಕಿಲ್ಲ. ಈಗಾಗಲೇ ಮನೆಗಳನ್ನು ಪಡೆದುಕೊಂಡು ಯಾರು ಇದ್ದಾರೆ, ಅವರು ಎಷ್ಟಕ್ಕೆ ಪಡೆದುಕೊಂಡಿದ್ದಾರೋ ಅದಕ್ಕಿಂತ ಹೆಚ್ಚು ಪುನಃ ರಿಪೇರಿಗೋಸ್ಕರ ಖರ್ಚು ಮಾಡಿದ್ದಾರೆ. ಇದರಲ್ಲಿ ಕಿಟಕಿ ಬಾಗಿಲುಗಳಲ್ಲಿ ಅತ್ಯಂತ ಕಳಪೆ ಗುಣಮಟ್ಟದ ಮರಗಳನ್ನು ಹಾಕಿ ಅತ್ಯಂತ ಕಡಿಮೆ ಗುಣಮಟ್ಟದಲ್ಲಿ ಸಿಮೆಂಟ್ ಮಿಕ್ಸಿಂಗ್‌ನಲ್ಲಿ ಬಹಳಷ್ಟು ಕುಂದುಕೊರತೆಗಳನ್ನು ಮಾಡಿ ಎಲ್ಲಾ ಮನೆಗಳು ಬೀಳುವ ಸ್ಥಿತಿಯಲ್ಲಿ ಮಾರಾಟವಾಗುವಂಥ ಪರಿಸ್ಥಿತಿ ಉದ್ಭವವಾಗಿದೆ. ತೆಗೆದುಕೊಂಡವರು ಎಷ್ಟು ಹಣವನ್ನು ವೆಚ್ಚಮಾಡಿದ್ದಾರೋ ಮತ್ತೆ ಅದಕ್ಕಿಂತ ಜಾಸ್ತಿ ಖರ್ಚು ಮಾಡಿದ್ದಾರೆ. ಕಳಪೆ ಕಾಮಗಾರಿಯ ಬಗ್ಗೆ ನಿಮಗೆ ವರದಿ ಬರಬೇಕು. ಅದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ:- ನನಗೆ ಇಲ್ಲಿಯವರೆಗೆ ಬಂದಿಲ್ಲ. ಏನಾದರು ಅಲ್ಲಿ ಕಳಪೆ ಕಾಮಗಾರಿ ಆಗಿದ್ದರೆ ದಯಮಾಡಿ ಅದನ್ನು ತಾವು ಕೊಡಿ. ಅದರ ಬಗ್ಗೆ ಪೂರ್ತಿ ತನಿಖೆ ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳು ಯಾರು ಅದಕ್ಕೆ ಕಳಪೆ ಕಾಮಗಾರಿಯಲ್ಲಿ ಭಾಗವಹಿಸಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ತಯಾರು ಇದ್ದೇನೆ.

ಶ್ರೀ ಯು.ಆರ್. ಸಭಾಪತಿ:- ನನ್ನ ಮೂರನೇ ಪ್ರಶ್ನೆ 1996-97ರ ಸಾಲಿನಲ್ಲಿ ಹೊಸದಾಗಿ ಎಷ್ಟು ಮನೆಗಳನ್ನು ಹುಡ್ಕೋ ಯೋಜನೆಯಲ್ಲಿ ಕಟ್ಟುವ ಗುರಿಯನ್ನು ಇಟ್ಟುಕೊಂಡಿದ್ದೀರಿ? ಅದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ:- ಹೌಸಿಂಗ್ ಬೋರ್ಡ್‌ನಿಂದ ಯಾವುದೂ ಇಲ್ಲ. ಆಶ್ರಯ ವತಿಯಿಂದ ತೆಗೆದುಕೊಳ್ಳುತ್ತಿದ್ದೇವೆ. ಹುಡ್ಕೋನಿಂದ ಯಾವುದೂ ಇಲ್ಲ.

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 2ನೇ ಆಗಸ್ಟ್ 1996ರ 20ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 71 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿರುವ ಗೊಬ್ಬರ ಮತ್ತು ಕ್ರಿಮಿಕೀಟನಾಶಕ ಅಂಗಡಿಗಳು.

1102 (2105) **ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ):-** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?